ಗೌರವಸ್ತಾರ. ಆಕೀನ್ನ ಸಮೃದ್ಧಿ, ಸಂಪತ್ತಿನ ದೇವತೆ ಮತ್ತ ಋತುಮಾನಗಳ ನಿಯಾಮಕಿ ಅಂತಾರ. ಅಲ್ಲಿ ಹ್ವಾದವರು ಗುಡಿ ಕಸಾ ಗುಡುಸು ಹರಕಿ ಹೊತ್ತಿರ್ತಾರಂತ.'

'ನಮ್ಮ ಗುಡ್ಯಾಗ ಕಸಾ ಗುಡುಸು ಹರಕಿ ಒಪ್ಪಸ್ತಾರ' ರೋಜಾ ನಡುವ ಬಾಯಿ ಹಾಕಿದಳು.

'ಎಲ್ಲಿ? ನಾ ಅಂಥಾದ್ದನ್ನ ಕೇಳೇ ಇಲ್ಲಲಾ?' ಅಂದಳು ಜುಬೇದಾ ಬಾನು.

'ಹ್ವಾದ ವರ್ಷ ನಮ್ಮಪ್ಪ ಕೇರಳಕ್ಕ ಪ್ರವಾಸಕ್ಕ ಕರಕೊಂಡ ಹೋಗಿದ್ದ. ಅಲ್ಲಿ ಕೊಚ್ಚಿನಗರದ ಉಪನಗರ ಎರ್ನಾಕುಲಂನ ವಲ್ಲರಪದಂನಾಗ ಇರೂ ಲೇಡಿ ಆಫ್ ರಾನ್ಸಮ್ ಬೆಸಿಲಿಕಾಗ ಹೋಗಿದ್ವಿ. ಅಲ್ಲಿ ಭಕ್ತರು ಗುಡಿ ಅಂಗಳದಾಗ ಕಸಾ ಗುಡಸ್ತಿದ್ದರು.'

'ಅಂಥಾದ್ದ ಗುಡಿ ಅಂಗಳಾ ಹುಡುಗು ಪದ್ಧತಿ ಇರೂ ಪಾರ್ವತಿ ಗುಡಿ ಐತಿ ಉತ್ತರ ಭಾರತದಾಗ' ಮಲ್ಲವ್ವನ ಅಪ್ಪ ಹೇಳಿದ.

'ಹೌದರಿ ಕಾಕಾರ?' ಮಕ್ಕಳು ವಿಚಾರಿಸಿದರು.

'ಹೌದ ಹೌದ, ಉತ್ತರಪ್ರದೇಶ ರಾಜ್ಯದ ಕೌಸಾಂಬಿ ಜಿಲ್ಲಾದಾಗ ಕರ ಅನ್ನೂ ಜಾಗದಾಗ ಶೀತಲ ದೇವಿ ಗುಡಿ ಅದ. ಆದರ ಅದು ಪಾರ್ವತಿ ಗುಡಿ. ಆಕಿ ಅಪ್ಪ ದಕ್ಷ ಮಹಾರಾಜ ಆಕಿ ಗಂಡ ಶಿವನನ್ನ ಅಪಮಾನ ಮಾಡಿದ್ದನ್ನು ಸಹಿಸದ ಯಜ್ಞಕುಂಡದೊಳಗ ಬಿದ್ದ ಸಾಯ್ತಾಳ. ದುಃಖದಿಂದ ಬಸವಳಿದ ಶಿವ, ಸಿಟ್ಟಿನ್ಯಾಗ ಆಕಿ ಶವ ಹೊತಗೊಂಡ ಹುಚ್ಚರಂಗ ದೇವಲೋಕ, ಭೂಲೋಕ ಮತ್ತ ಪಾತಾಳಲೋಕದಾಗ ತಿರಗಾಡಾಕ ಶುರುಮಾಡ್ತಾನ. ಶಿವನ ಸಿಟ್ಟನ್ನ ತಣಸಾಕ ವಿಷ್ಣು ತನ್ನ ಸುದರ್ಶನ ಚಕ್ರದಿಂದ ಶವಾನ್ನ 51 ತುಂಡ ಮಾಡ್ತಾನ. ಆ ತುಂಡ ಬಿದ್ದಲ್ಲೆಲ್ಲಾ ಪಾರ್ವತಿ ಗುಡಿ ಕಟ್ಟತಾರ. ಕರ ಅನ್ನೂ ಜಾಗದಾಗ ಪಾರ್ವತಿ ಕೈ ಬಿದ್ದಿರ್ತದ. ಪಾಂಡವರ ವನವಾಸದಾಗ ಅಲ್ಲಿಗೆ ಬಂದಿದ್ದ ಯುಧಿಷ್ಠಿರ ಗಂಗಾ ನದಿ ದಡದಾಗ ಆಕಿಗೆ ಒಂದ ಗುಡಿ ಕಟ್ಟಸ್ತಾನ. ಈಗಿನ ಗುಡಿ ಒಂದ ಸಾವಿರ ವರ್ಷ ಹಳೆಯ ಗುಡಿ. ಚೈತ್ರ ಮಾಸದ ಕೃಷ್ಣ ಪಕ್ಷದ ಅಷ್ಟಮಿ ದಿನ ಮಂದಿ ಅಲ್ಲಿ ದೊಡ್ಡ ಪೂಜಿ ಮಾಡಿ ದುಷ್ಟ ಶಕ್ತಿಗಳಿಂದ ಕಾಪಾಡಮ್ಮ ಅಂತ ಕೇಳಕೋತಾರ. ಆಷಾಢ ತಿಂಗಳದಾಗ ಏಳ ದಿನಾ ಜಾತ್ರಿ ನಡಿತದ. ಆ ಟೈಮಿನ್ಯಾಗ ದನದ ಜಾತ್ರಿ ನಡದರ ಅದರಾಗ ಕತ್ತಿ, ಕುದುರಿ ವ್ಯಾಪಾರ ನಡೀತದ. ಕೈಯಾಗ ಕಸಬರಿಗೆ ಹಿಡಕೊಂಡ ದೇವಿ ಕತ್ತಿ ಮ್ಯಾಲ ಕೂಡತಾಳ ಅಂತ ನಂಬು ಮಂದಿ ಅಲ್ಲಿನ ಕತ್ತಿಗೋಳಿಗೆ ಕಾಳುಕಡಿ, ಕಾಯಿಪಲ್ಲೆ, ಹಸರ ಹುಲ್ಲು ತಿನ್ನಸ್ತಾರ.'

'ಅಂಥಾದ್ದ ಕತ್ತಿಗೆ ಹುಲ್ಲು ತಿನ್ನಸೂ ಪದ್ಧತಿ ನಮ್ಮಲ್ಲಿತ್ತಂತ ನೋಡ್ರಿ ಕಾಕಾ. ಊರಾಗ ಅದರ ಮೆರವಣಿಗೆನೂ ಮಾಡ್ತಿದ್ದರಂತ. ಆದರ, ಈಗ ಅದನ್ನ ಬಿಟ್ಟ ಬಿಟ್ಟಾರಂತ ಮಂದಿ,' ರೋಜಾ ಹೇಳಿದಳು.

'ಏನ್ ಕತೀನ ಅದು, ರೋಜಾ?' ಮಲ್ಲವ್ವನ ಅಪ್ಪ ಕೇಳಿದ.

'ಏನ್ ಕತಿ ಅದು? ನಮಗೂ ಹೇಳ' ಮಕ್ಕಳು ಗೋಗರೆದವು.

'ಪುಣೇದಾಗಿನ ನಮ್ಮ ಹಿರಿದೊಡ್ಡಪ್ಪನ ದೊಡ್ಡ ಮಗಾ, ಎಂಜಿನಿಯರಿಂಗ್ ಮುಗಸಿ ಫ್ರಾನ್ಸ್ ದೇಶದಾಗ ನೌಕರಿ ಮಾಡಾಕ್ಹತ್ತಾನ. ಅಂವಾ ಊರಿಗಿ ಬಂದಾಗ ನಮಗ ಆ ಕತ್ತಿ ಕತಿ ಹೇಳಿದ್ದ.'

***

'ಈ ಕತ್ತಿ ಮೆರವಣಿಗಿ, ಕತ್ತಿಗೆ ಹುಲ್ಲು ಕಾಳುಕಡಿ ತಿನ್ನಸೂ ಪದ್ಧತಿ ಯುರೋಪ ಖಂಡದ ಫ್ರಾನ್ಸ್ ದೇಶದಾಗ ಶತಮಾನಗಳ ಹಿಂದ ಇತ್ತಂತ. ಅದನ್ನ 'ಫೆಸ್ಟಂ ಆಸಿನೋರಮ್' ಅಂತಿದ್ರಂತ. ಅಂದ್ರ ಫ್ರೆಂಚ್ ಭಾಷಾದಾಗ ಕತ್ತಿಗಳ ಹಬ್ಬ ಇಲ್ಲಾ ಉತ್ಸವ ಅನ್ನೂ ಅರ್ಥ ಐತಿ', ರೋಜಾ, ಕತ್ತಿ ಉತ್ಸವದ ಕತಿ ಹೇಳಾಕ ಶುರು ಮಾಡಿದಳು.

'ಎರಡ ಸಾವಿರ ಶತಮಾನಗಳ ಹಿಂದ, ಯೇಸುಸ್ವಾಮಿ ಹುಟ್ಟಿದಾಗ ಅವನಿಂದ ಅಲ್ಲಿನ ಅರಸ ಹೆರೋದಂಗ ತ್ರಾಸಾಗ್ತದ ಅಂತ ಗೊತ್ತಾಗಿ, ಅವನನ್ನ ಸಾಯಸಾಕ ನೋಡ್ತಿದ್ದನಂತ.'

'ಅಯ್ಯ ಖೋಡಿ, ನಮ್ಮ ದೇವಕಿ ಸುತ, ಹುಟ್ಟಿದ ಕೂಸು ಕೃಷ್ಣಗ ಸಾಯಸಾಕ ಅವನ ಸ್ವಾದರ ಮಾವ ಮಥುರಾದ ಅರಸ ಕೌಂಸ ಗಂಟಬಿದ್ದಂಗ ನಿಮ್ಮ ಯೇಸುಸ್ವಾಮಿಗೆ ಹೆರೋದ ಗಟ್ಟ ಬಿದ್ದಿದ್ನ?' ಮಲ್ಲವ್ವನ ಅವ್ವ ಕೇಳಿದಳು.

'ಹೌದರಿ ವೈನಿ, ನೀವಂದದ್ದು ಖರೆ. ಕೂಸು ಕೃಷ್ಣನ್ನ ಅವರಪ್ಪ ವಾಸುದೇವ ಹೊಳಿದಾಟಿಸಿ ಗೋಕುಲಕ್ಕ ಬಿಟ್ಟಬಂದಂಗ, ನಮ್ಮ ಹಸುಕೂಸು ಯೇಸುವನ್ನ ಬಾಣಂತಿ ತಾಯಿ ಮರಿಯವ್ವನ್ನ ಕತ್ತಿ ಮ್ಯಾಲ ಕೂಡಿಸಿಕೊಂಡ ಜೋಸೆಫರು ಈಜಿಪ್ಟಿಗೆ ಓಡಿ ಹೋಗ್ತಾರ. ಅದರ ನೆಪ್ಪಿಲೆ ಫ್ರಾನ್ಸ್ ದೇಶದಾನ ಹಳ್ಯಾನ ಮಂದಿ, ಶತಮಾನಗಳಿಂದ ಮಕರ ಸಂಕ್ರಾಂತಿ ಆಜುಬಾಜು ಬರೂ ಜನವರಿ ತಿಂಗಳ 15ನೇ ತಾರೀಖು, ಊರಾನ ಒಬ್ಬ ಹರೇದ ಹೆಣ್ಮಗಳನ್ನು ಕತ್ತಿ ಮ್ಯಾಲ ಕೂಡಿಸಿ ಊರ ಓಣ್ಯಾಗೆಲ್ಲಾ ಮೆರವಣಿಗಿ ಮಾಡ್ತಿದ್ದರು. ಗುಡಿಗಿ ಬಂದ ಮೆರವಣಿಗಿ ನಿಂತಾಗ, ಗುಡ್ಯಾಗ ಪೂಜಿ ನಡಿತಿದ್ದವು. ಆಗ ಮಂದಿ ಕತ್ತಿ ಹಂಗ ಒದರತಿದ್ದರು. ಪೂಜಿ ಆದಮ್ಯಾಲ ಮೆರವಣಿಗ್ಯಾಗ ಬಂದ ಕತ್ತಿಗೆ ಪ್ರತಿಯೊಂದ ಮನ್ಯಾಗೂ ಹುಲ್ಲು, ಬಾರ್ಲಿ ತಿನ್ನಸತಿದ್ದರಂತ.'

ಈ ಕತ್ತಿ ಕತಿ ಕೇಳತಾ ಕೇಳತಾ, ಜುಬೇದಾ ಬಾನೂಗೂ ಮದರಸಾದಾಗ ಕೇಳಿದ್ದ ಕತ್ತಿ ಕತಿಗಳು ನೆನಪಾದವು.

'ನಮ್ಮಲ್ಲಿನೂ ಕತ್ತಿ ಕತಿ ಅದಾವು' ಅನಕೋತ ಮಾತ ಹಚ್ಚಿದ ಜುಬೇದಾ ಬಾನು, 'ಬಿಳಿ ಬಣ್ಣದ ಅರ್ಧ ಹೇಸರಗತ್ತಿ ಮತ್ತ ಊರಾನ ಕತ್ತಿ ಆಕಾರದ, ಎಡಕ ಬಲಕ ಒಂದೊಂದ ರೆಕ್ಕೆಗಳಿದ್ದ ಪ್ರಾಣಿ ಹತ್ತಿ ಪ್ರಯಾಣ ಮಾಡಿದ ಪ್ರವಾದಿ ಮೊಹಮ್ಮದ, ಒಂದ ರಾತ್ರಿಯೊಳಗ ಮೆಕ್ಕಾದಿಂದ ಜೆರುಸಲೇಮ ಮುಟ್ಟಿ ಹೊಳ್ಳಿ ಬಂದಿದ್ನಂತ. ಮತ್ತ ಅದ ಪ್ರಾಣಿ ಬೆನ್ನ ಮ್ಯಾಗ ಕೂತ ಪ್ರವಾದಿ ಮೊಹಮ್ಮದ ಸ್ವರ್ಗಕ್ಕೂ ಹ್ವಾದ್ನಂತ.'

'ಅದು ಪುರಾಣದ ಕತಿ ಆದರ, ಇಸ್ಲಾಂ ಪಂಚಾಂಗದ ಪ್ರಕಾರ, ವಸಂತ ಋತುವಿನ ಮೊದಲ ತಿಂಗಳು `ರಾಬಿ ಅಲ್ ಅವ್ವಾಲ್'ನ ಹನ್ನೆರಡನೇ ದಿನಕ್ಕ ಪ್ರವಾದಿ ಮೊಹಮ್ಮದನ ಹುಟ್ಟುಹಬ್ಬ ಮಾಡ್ತೇವಿ. ಆ ದಿನ ಅಕ್ಟೋಬರ್ ನವೆಂಬರ್ ತಿಂಗಳಗಳಿಗೆ ಸರಿ ಹೋಗ್ತದ. ಆ ವ್ಯಾಳ್ಯಾದಾಗ, ಪೂರ್ವ ಆಫ್ರಿಕಾದ ಕೀನ್ಯಾ ದೇಶದ ಲಾಮು ಅನ್ನೂ ಪುರಾತನ ಊರಿನ್ಯಾಗ, ನಮ್ಮಲ್ಲಿ ಸಂಕ್ರಾಂತಿ ಹಬ್ಬದಾಗ ಹೋರಿ ಓಡಿಸಿ ಹಿಡಿಯೂದು, ಚಕ್ಕಡಿ ಓಡಿಸೂ ಸ್ಪರ್ಧೆ ನಡದರ, ಕತ್ತಿಗಳ್ನ ಓಡಿಸು ರೇಸ್ ನಡಿತದ.'

***

ಅಷ್ಟರಾಗ ರೋಜಾನ ಅಜ್ಜಿ ಅಲ್ಲಿಗೆ ಬಂದ್ರು.

'ಈ ಸಭಾಗ ನೀವು ಒಬ್ಬರ ಹಿರ್ಯಾರು ಬೇಕಾಗಿತ್ತು ಬರ್ರಿ, ಕೂಡ್ರಬರ್ರಿ' ಎನ್ನುತ್ತಾ ಮಲ್ಲವ್ವನ ಅವ್ವ ರೋಜಾನ ಅಜ್ಜೀನ ತಮ್ಮ ಮಗ್ಗಲಕ ಕಟ್ಟಿ ಮ್ಯಾಲ ಕೂಡಿಸಿಕೊಂಡಳು.

'ಏನ ಹರಟಿ ಶುರು ಹಚ್ಚಗೊಂಡೀರಿ? ಮೂರು ಸಂಜಿ ಮುಂದ. ಹುಡುಗ್ರು ಆಡೂದ ಬಿಟ್ಟ ಇಲ್ಲೇನ ಪಟ್ಟಂಗ ಹಚ್ಯಾವು?'

'ಕತ್ತಿ ಜಾತ್ರಿಗೋಳದ್ದ ಮಾತ ನಡದಾವರಿ. ನಮ್ಮ ಕಾಕಾ ಉತ್ತರ ಭಾರತಾಗಿನ ಕತ್ತಿ ಜಾತ್ರಿಗಳ ಬಗ್ಗಿ ಹೇಳತಿದ್ದರ, ನಿಮ್ಮ ಮೊಮ್ಮಗಳು ಫ್ರಾನ್ಸ ದೇಶದಾಗಿನ ಹಳೆ ಕತ್ತಿ ಉತ್ಸವಗಳ ಬಗ್ಗಿ, ಜುಬೇದಾ ಅದೇನೋ ಕೀನ್ಯಾ ದೇಶದ ಕತ್ತಿ ರೇಸ್ ಹೇಳತಿದ್ದಳರಿ' ಮಲ್ಲವ್ವ ಹೇಳಿದಳು.

'ಏ ಪಾರಗೋಳ್ರ್ಯಾ, ಈಗ್ಯಾಕ ಕತ್ತಿ ಬಗ್ಗಿ ಮಾತುಕತಿ ಹಚ್ಚೀರಿ'

'ಅದರೀ, ನಿಮ್ಮ ಮನಿಗೆ ಲಕ್ಷ್ಮಿ ಬಂದಾಳಂತಲಾ? ಅದರದ ಚರ್ಚಾ ನಡಿಮುಂದ ಈ ಕತ್ತಿಗಳ ಕತಿ ಬಂದಾವರಿ' ಎಂದ ಜುಬೇದಾ ಬಾನು, 'ಅಲ್ರಿ ಅಜ್ಜಿ, ಹೋಗಿ ಹೋಗಿ ನಿಮ್ಮ ಮನೀಗೆ ಯಾಕ ಲಕ್ಷ್ಮೀ ಬರ್ತಾಳ್ರಿ? ನೀವ ಹೇಳ್ರಿ' ಎಂದು ಪ್ರಶ್ನೆ ಮಾಡಿದಳು.

'ಏ ಮಾರಾಯ್ತಿ ಏನ್ ಅನ್ನಾಕ್ಹತ್ತಿ? ನಮ್ಮ ಮನಿ

